ಈ ದಿನ ದಿನಾಂಕ 05-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಎ ಪಿ ಎಂ ಸಿ ಯ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ದಾವೆಯಲ್ಲಿ ವಾದಿಯು ಪರಿಹಾರ ಕೇಳಿ ದಾವೆ ಹಾಕಿರುವುದಿಲ್ಲ, ಅವರ ಜಾಗ ಅವರದ್ದು ಎಂದು ಹೇಳಿ ದಾವೆ ಹಾಕಿರುತ್ತಾರೆಂದು ನುಡಿಯುತ್ತಾರೆ. ವಾದಿಯು ಮಾರುಕಟ್ಟೆಯಲ್ಲಿ ದಿನಸಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆಂದರೆ ಸರಿ. ಲಾರಿ ವೀರಪ್ಪನವರ ಮನೆಯಲ್ಲಿ ನಾನು ವಾಸವಾಗಿದ್ದೇನೆಂದರೆ ಸರಿಯಲ್ಲ. ದಾವಸ್ವತ್ತಿನ ಖಾತೆ ನಂಬರ್ ಹೇಳಲಾಗುವುದಿಲ್ಲ. ದಾವಸ್ವತ್ತಿನ ಒಟ್ಟು ವಿಸ್ತೀರ್ಣ ಉ-ದ 40 ಅಡಿ, ಪೂ-ಪ 145 ಅಡಿ ಇರುತ್ತದೆ. ದಾವಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಖಾಸಗೀ ಸ್ವತ್ತು ಇರುತ್ತದೆ. ನಾನು ಹೇಳಿದ ಖಾಸಗೀ ಸ್ವತ್ತು ಯಾರದ್ದೆಂದು ನನಗೆ ಗೊತ್ತಿರುವುದಿಲ್ಲ.

ವಾದಿ ಯಾರ ವಿರುದ್ದ ದಾವೆ ಸಲ್ಲಿಸಿರುತ್ತಾರೆಂದು ನನಗೆ ಹೆಸರು ಹೇಳಲಾಗುವುದಿಲ್ಲ. ವಾದಿಯು ಯಾರ ವಿರುದ್ದ ದಾವೆ ಸಲ್ಲಿಸಿರುತ್ತಾರೋ ಅವರೇ ದಾವಸ್ವತ್ತಿನ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. 2 ನೇ ಪ್ರತಿವಾದಿಯನ್ನು ನಾನು ನೋಡಿರುತ್ತೇನೆ. 2ನೇ ಪ್ರತಿವಾದಿಯು ಗುಜರಿ ಅಂಗಡಿ ಇಟುಕ್ಕೊಂಡು ದಾವಸ್ವತ್ತಿನಲ್ಲಿ ವ್ಯಾಪಾರ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹುಟ್ಟಿದಾಗಿನಿಂದಲೂ ವಾದಿ ಮತ್ತು ಅವರ ಅಣ್ಣನೇ ದಾವಸ್ವತ್ತಿನ ಸ್ವಾಧೀನದಲ್ಲಿದ್ದಾರೆಂದು ನುಡಿಯುತ್ತಾರೆ. ದಾವಸ್ವತ್ತಿನಲ್ಲಿ ಹಳೇ ಗುಜರಿ ವಸ್ತುಗಳು ದಾಸ್ತಾನು ಇದೆ ಎಂದರೆ ಸರಿ.

ವಾದಿಗಳು ಗುಜರಿ ವ್ಯಾಪಾರ ಮಾಡುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಮಕ್ಕಳು ಗುಜರಿ ವ್ಯಾಪಾರ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ವಾದಿಯು ಊರೂರು ತಿರುಗಿ ದಲ್ಲಾ ವ್ಯಾಪಾರ ಮಾಡುವುದು ಮತ್ತು ಜೋಳ ವ್ಯಾಪಾರ ಮಾಡುವುದು, ಭತ್ತ ವ್ಯಾಪಾರ ಮಾಡುವುದು ಮಾಡುತ್ತಾರೆಂದರೆ ಸರಿಯಲ್ಲ. ನಾನು ಮತ್ತು ವಾದಿ ಸ್ನೇಹಿತರಾಗಿರುವುದರಿಂದ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿ ನನ್ನ ನೆರೆಹೊರೆಯವರು ಆದರೆ ಸಂಬಂಧಿಕರಲ್ಲ. ದಾವಸ್ವತ್ತಿನ ನೆರೆಹೊರೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಧಾರ್‌ಕಾರ್ಡನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ಮಾರುಕಟ್ಟೆಯ ಮೂಗಳಪ್ಪರವರ ಮನೆಯಲ್ಲಿ ನೀವು ವಾಸವಾಗಿದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ